ಹಕ್ಕು. ಸೆಕ್ಯುಲರ್ ನೇಶನ್ ಮಾಡಬೇಕೆಂದು, ರಾಷ್ಟ್ರ ಆಯಾಮದಲ್ಲಿ ಚರ್ಚೆಮಾಡಿ, ರಾಜ್ಯಾಂಗ ರಚನೆ ಮಾಡಿ ಅದಕ್ಕೆ ಸೆಕ್ಯುಲರ್ ಕ್ಯಾರೆಕ್ಟರ್ ಕೊಟ್ಟಂತಹ ದೇಶದಲ್ಲಿ ಈಗ ಅದೇ ಜಾಗ ಬೇಕು ಬಾವುಟ ಹಾರಿಸುವುದಕ್ಕೆ ಸಂಘಪರಿವಾರದವರಿಗೆ ಅದೇ ಜಾಗ ಬೇಕು, ಅವರ ಕೇಂದ್ರ ಕಚೇರಿಯಲ್ಲಿ ಹಾರಿಸುವುದಿಲ್ಲ. ಈ ಪ್ರಶ್ನೆ ಪ್ರಾರಂಭವಾದದ್ದು ಮೂರು ವರ್ಷಗಳ ಹಿಂದೆ, ಏನು ಪ್ರಯತ್ನ ಮಾಡಿದಿರಿ ಎಂದರೆ, ನಾನು ಡಿಜಿಪಿ ಮತ್ತು ಐಜಿ ರಾಮಲಿಂಗಂ ಅವರಿಗೆ ಫೋನ್ ಮಾಡಿಹೇಳಿದೆ, ಏನಾದರೂ ಸಾಧ್ಯವೇ, ಇದನ್ನು ಪರಿಹಾರ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರೋ! ಎಲ್ಲರೂ ಸೇರಿ ಮತ್ತೊಂದು ಗಲಾಟೆ ಆಗಬಹುದು ಬೇಡ, ಸಾಧ್ಯವಾಗುವುದಿದ್ದರೆ ಪ್ರಯತ್ನ ಮಾಡೋಣ, ಅಲ್ಲಿ ಅವರಿಗಿದ್ದಂತಹ ಕಷ್ಟ ಏನು? ಈ ಈದ್ಗಾ ರಕ್ಷಣೆ ಮಾಡುವುದು, ರಕ್ಷಣೆ ಮಾಡುವುದಕ್ಕೆ ನಮ್ಮ ಪೋಲಿಸರು ಸಾಕಾಗಿರಲಿಲ್ಲವೇ? 8 ಪೋಲೀಸ್ ಠಾಣೆಗಳಲ್ಲಿ ಕರ್ಫ್ಯೂ ಹಾಕಿದ್ದೀರಿ. ರಾಜ್ಯದ ಪೋಲೀಸ್ ಪಡೆ ಅಲ್ಲಿಗೆ ಹೋಗಿ ನಿಂತಿದೆ. ಮರಾಠ ರಿಜಿಮೆಂಟ್ ಬಂದಿದ್ದಾರೆ. ಇಷ್ಟೆಲ್ಲಾ ಇದ್ದುಕೊಂಡು ಜನ ಅಲ್ಲಿ ಹೇಗೆ ಸೇರಿದರು? 15ನೇ ತಾರೀಖು ಅಲ್ಲಿ ಜನರು ಸೇರುವುದಕ್ಕೆ ಏಕೆ ಬಿಟ್ಟಿದ್ದೀರಿ? ಇಷ್ಟೆಲ್ಲಾ ದೊಡ್ಡ ಕಾರ್ಟೂನ್ಗಳನ್ನು ಮಾಡಿದ್ದೀರಿ. ಇಷ್ಟೆಲ್ಲಾ ಕರ್ಫ್ಯೂ ಹಾಕಿ, 8 ಪೋಲೀಸ್ ಕ್ಷೇತ್ರಗಳಲ್ಲಿ ಕರ್ಫ್ಯೂ ಇದ್ದು ಇಷ್ಟೊಂದು ಜನ ಅಲ್ಲಿ ಹೇಗೆ ಸೇರಿದರು. ಹೋಮ್ ಮಿನಿಷ್ಟರ್ ಕೋಲಾರದಲ್ಲಿ, ಚಿಂತಾಮಣಿಯಲ್ಲಿ ಇರುತ್ತಾರೆ. ಮೆರವಣಿಗೆ ಮಾಡಿಸಿಕೊಂಡು, ವರದಿಯಾದರೂ ಇವರು ಯಾರಿಗೆ ಕೊಡುತ್ತಿದ್ದಾರೆ. ಹೋಮ್ ಮಿನಿಷ್ಟರ್ಗೆ ಕೊಡುತ್ತಾರೋ? ಮಾನ್ಯ ಮುಖ್ಯಮಂತ್ರಿಯವರಿಗೆ ಕೊಡುತ್ತಾರೊ? ಇದರ ವ್ಯವಸ್ಥೆ ಏನು? ರಾಜ್ಯದಲ್ಲಿ ಒಬ್ಬ ಹೋಮ್ ಮಿನಿಸ್ಟರ್ ಇದ್ದಾರೆ. ಇದುವರೆಗೂ ಒಂದು ಹೇಳಿಕೆಯನ್ನು ಏನಾದರೂ ಮಾಡಿದ್ದಾರೆ? ಅಲ್ಲಿ ನಡೆದ ಪ್ರಸಂಗ· ಅವರ ಗಮನಕ್ಕೆ ಬಂದಿದೆಯೇ? ಇದು ತನ್ನ ವ್ಯಾಪ್ತಿಗೆ ಬರುತ್ತದೆ· ಎಂದು ಅವರಿಗೆ ಏನಾದರೂ ಗೊತ್ತಿದೆಯೇ, ಅವರೆ ಏನಾದರೂ ಅಲ್ಲಿಗೆ ಹೋಗಿದ್ದರೊ? ಇದು ಜಂಟಿ ರೆಸ್ಪಾನ್ಸಿಬಿಲಿಟಿಯನ್ನು ತಾವು ಲಘುವಾಗಿ ತೆಗೆದುಕೊಂಡಿದ್ದೀರಿ. ಇದುವರೆಗೆ ಹೋಮ್ ಮಿನಿಸ್ಟರ್ ರಾಜ್ಯದಲ್ಲಿ ಇದ್ದಾರೆಂದು ತಮ್ಮ ಗಮನಕ್ಕೆ ಬಂದಿಲ್ಲ, ಬಂದಿದ್ದರೆ, ಡಿ.ಜಿ.ಪಿ., ಐ.ಜಿ.ಪಿ.ಯವರು .....

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಗೃಹ ಮಂತ್ರಿಗಳು ಇಲ್ಲಿ ಇದ್ದಾರೆ. ಅವರಿಗೆ ಏನು ಹೇಳುತ್ತೀರಿ?

ಶ್ರೀ ಡಿ.ಬಿ. ಚಂದ್ರೇಗೌಡ : ಸ್ವಾತಂತ್ರ್ಯ ದಿವಸವೇ ಏಕೆ ಬೇಕು, ಬಾವುಟ ಹಾರಿಸುವುದಕ್ಕೆ, ಇವತ್ತು ಏಕೆ ಹೋಗುವುದಿಲ್ಲ. ದೇಶದಲೆಲ್ಲಾ ಸಂತೋಷವಾಗಿ ಸ್ವಾತಂತ್ರ್ಯ ಅನುಭವಿಸುತ್ತಿದ್ದರೆ ಅಲ್ಲಿ ಏಕೆ ಈ ರೀತಿ ಮಾಡಬೇಕಾಗತ್ತು. ಎಲ್ಲಿ ಜಗಳ, ವಿವಾದಾಸ್ಪದ ಜಾಗ ಇದೆಯೋ ಅಲ್ಲಿಗೆ ಏಕೆ ಹೋಗಬೇಕಾಗಿತ್ತು. ಆ ವಿವಾದಕ್ಕೆ ನಾನು ಹೋಗುವುದಿಲ್ಲ. ಅದು ಕೋರ್ಟ್ನಲ್ಲಿ ಇದೆ. ಅದು ಏನು ತೀರ್ಮಾನವಾಗುತ್ತದೋ ಆಗಲಿ.

ಉಪಾಧ್ಯಕ್ಷರು : ಈಗ ಸಭೆಯು ಮುಕ್ತಾಯಗೊಂಡು ಮತ್ತೆ ಮಧ್ಯಾಹ್ನ 3 ಗಂಟೆಗೆ ಸೇರುವುದು.

(ಸಭೆಯು ಪುನಃ 3-25 ನಿಮಿಷಕ್ಕೆ ಪ್ರಾರಂಭವಾಯಿತು. ಶ್ರೀ ವಿ.ಎಸ್. ಕೌಜಲಗಿಯವರು ಅಧ್ಯಕ್ಷ ಪೀಠಕ್ಕೆ ಬಂದರು)

ಪ್ರಕಟಣೆ I

ಅಧ್ಯಕ್ಷರು : ವಿಧಾನಸಭೆಯ ಸದಸ್ಯರುಗಳಾದ ಶ್ರೀ ಎಂ. ರಾಜಶೇಖರ ಮೂರ್ತಿ ಮತ್ತು ಡಾ|| ಜೀವರಾಜ ಆಳ್ವ ಅವರುಗಳ ವಿಧಾನಸಭೆಯ ಸದಸ್ಯತ್ವಕ್ಕೆ ನೀಡಿದ ರಾಜೀನಾಮೆಗಳನ್ನು ಅನುಕ್ರಮವಾಗಿ 14-4-1994 ಮತ್ತು 4-8-1994ನೇ ದಿನಾಂಕಗಳಂದು ಅಂಗೀಕರಿಸಲಾಗಿದೆ.

ಪ್ರಕಟಣೆ II

ದಿನಾಂಕ 24ನೇ ಆಗಸ್ಟ್ 1994 ರಂದು ನಡೆದ ವಿಧಾನಸಭೆಯ ಕಾರ್ಯಕಲಾಪಗಳ ಸಲಹಾ ಸಮಿತಿಯ ಸಭೆಯು ಪ್ರಸ್ತುತ ಅಧಿವೇಶನದಲ್ಲಿ ಈ ಕೆಳಕಂಡಂತೆ ಕಾರ್ಯಕಲಾಪಗಳನ್ನು ನಡೆಸಲು ತೀರ್ಮಾನಿಸಲಾಯಿತು.

ಗುರುವಾರ, ದಿನಾಂಕ 25-8-1994	1) ಪ್ರಶ್ನೆಗಳು 2) ಗಮನ ಸೆಳೆಯುವ ಸೂಚನೆಗಳು 3) ಶಾಸನ ರಚನೆ 4) ಶಾಸನಾತ್ಮಕ ನಿರ್ಣಯಗಳು
ಶುಕ್ರವಾರ, ದಿನಾಂಕ 26-8-1994	1) ಪ್ರಶ್ನೆಗಳು 2)ಗಮನ ಸೆಳೆಯುವ ಸೂಚನೆಗಳು 3) ವಿತ್ತೀಯ ಕಾರ್ಯಕಲಾಪಗಳು 4) ಶಾಸನ ರಚನೆ 5) ಖಾಸಗಿ ಕಾರ್ಯಕಲಾಪಗಳು
ಸೋಮವಾರ, ದಿನಾಂಕ 29-8-1994 ರಿಂದ ಗುರುವಾರ ದಿನಾಂಕ 1-9-1994ರವರೆಗೆ	1) ಪ್ರಶ್ನೆಗಳು 2) ಗಮನ ಸೆಳೆಯುವ ಸೂಚನೆಗಳು. 3) ವಿತ್ತೀಯ ಕಾರ್ಯಕಲಾಪಗಳು 4) 1994-95ನೇ ಸಾಲಿನ ಅನುಪೂರಕ ಅಂದಾಜುಗಳ (ಪ್ರಥಮ ಕಂತು) ಮಂಡನೆ 5) ಶಾಸನ ರಚನೆ
ಶುಕ್ರವಾರ, ದಿನಾಂಕ 2-9-1994	1) ಪ್ರಶ್ನೆಗಳು 2) ಗಮನ ಸೆಳೆಯುವ ಸೂಚನೆಗಳು 3) ವಿತ್ತೀಯ ಕಾರ್ಯಕಲಾಪಗಳು 4) ಖಾಸಗಿ ಕಾರ್ಯಕಲಾಪಗಳು
ಸೋಮವಾರ, ದಿನಾಂಕ 5-9-1994	1) ಪ್ರಶ್ನೆಗಳು 2) ಗಮನ ಸೆಳೆಯುವ ಸೂಚನೆಗಳು 3) ವಿತ್ತೀಯ ಕಾರ್ಯಕಲಾಪಗಳು
ಮಂಗಳವಾರ, ದಿನಾಂಕ 6-9-1994	1) ಪ್ರಶ್ನೆಗಳು 2) ಗಮನ ಸೆಳೆಯುವ ಸೂಚನೆಗಳು 3) ವಿತ್ತೀಯ ಕಾರ್ಯಕಲಾಪಗಳು 4) ಶಾಸನ ರಚನೆ-ಧನ ವಿನಿಯೋಗ ವಿಧೇಯಕ ಮಂಡನೆ ಹಾಗೂ ಅಂಗೀಕಾ 5) 1994-95ನೇ ಸಾಲಿನ ಅನುಪೂರಕ ಅಂದಾಜುಗಳ (ಪ್ರಥಮ ಕಂತು) ಮೇಲೆ ಚರ್ಚೆ ಹಾಗೂ ಮತಕ್ಕೆ ಹಾಕುವುದು

6) ಶಾಸಕರ ದಿನಾಚರಣೆ

ಬುಧವಾರ, ದಿನಾಂಕ 7-9-1994

1) ಪ್ರಶ್ನೆಗಳು

2) ಗಮನ ಸೆಳೆಯುವ ಸೂಚನೆಗಳು

3) ಶಾಸನ ರಚನೆ

ಕಾರ್ಯಕಲಾಪಗಳ ಸಲಹಾ ಸಮಿತಿಯ ಶಿಫಾರಸ್ಸುಗಳನ್ನು ಈ ಸದನವು ಒಪ್ಪಿದೆ ಎಂದು ಭಾವಿಸುತ್ತೇನೆ.

+ ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೆ, ಆಗಸ್ಟ್ 15ನೇ ತಾರೀಖು ಹುಬ್ಬಳ್ಳಿಯಲ್ಲಿ ನಡೆದಂತಹ ದುರದೃಷ್ಟ ಘಟನೆ ಬಗ್ಗೆ ಚರ್ಚೆ ಮಾಡುತ್ತಿದ್ದೇವೆ. ನಾನು ಕರ್ನಾಟಕ ರಾಜ್ಯದ ವ್ಯವಸ್ಥೆಯನ್ನು ಪ್ರಸ್ತಾಪಿಸುತ್ತಿದ್ದೆ. ಆ ವ್ಯವಸ್ಥೆ ಇದೆ ಎಂದು ನೆನಪು ಕೊಡುವುದಕ್ಕಾಗಿ ಗೃಹಸಚಿವರು ಸದನದಲ್ಲಿ ಹಾಜರಿದ್ದಾರೆ, ಅದಕ್ಕಾಗಿ ಅವರಿಗೆ ಅಭಿನಂದನೆ ಸಲ್ಲಿಸುತ್ತೇನೆ. ನಾನು ವಿವರಕ್ಕೆ ಹೋಗುವುದಿಲ್ಲ. ಡಿಸೆಂಬರ್ 6, 1992ರಲ್ಲಿ ಅಯೋಧ್ಯೆಯಲ್ಲಿ ನಡೆದ ಘಟನೆ ಸಂದರ್ಭದಲ್ಲಿ ಇಂಗುತಿಂದ ಮಂಗನಂತಿದ್ದ ಬಿಜೆಪಿಯವರು ಹುಬ್ಬಳ್ಳಿಯಲ್ಲಿ ಗೋಲಿಬಾರಾದಾಗ ಗಾಂಧಿ ಪ್ರತಿಮೆ ಕೆಳಗೆ ಕುಳಿತು ಭಜನೆ ಮಾಡುತ್ತಿದ್ದರು. ಆ ಸಂದರ್ಭದಲ್ಲಿ ಉತ್ತರಪ್ರದೇಶದಲ್ಲಿ ಚುನಾವಣೆ ಇತ್ತು. ಅದರ ಲಾಭಕ್ಕಾಗಿ ಮಾಡಿದರು. ಈಗಿಲ್ಲಿ ಕೂಡ ಅಂತಹುದೇ ಲಾಭ ಸಿಕ್ಕೀತು ಅನ್ನುವಂತಹ ಪ್ರಯತ್ನ ನಡೆಯಿತು. ಇದರ ಪರಿಣಾಮ ಯವ ದಿನವನ್ನು ನಾವು ಸಂತೋಷ, ಆನಂದ ಅಭಿಮಾನ ಮತ್ತು ಒಂದು ರಾಷ್ಟ್ರದ ಅತ್ಯಂತ ಸಂತಸ ಪಡುವಂತಹ ದಿನವನ್ನು ಭೀಕರವಾದ ಸ್ಮಶಾನಸದೃಶವಾದ ಸಂದರ್ಭವನ್ನು ಸೃಷ್ಟಿ ಮಾಡಿದ್ದಾರೆ. ಇದು ಎಲ್ಲರೂ ಆಲೋಚನೆ ಮಾಡಬೇಕಾದ್ದೆ. ಇಲ್ಲಿ ನಾಲ್ಕು ಪ್ರಶ್ನೆಗಳಿಗೆ ನಾವು ಉತ್ತರ ಹೇಳಬೇಕಾಗುತ್ತದೆ. ಒಂದು, ಗೋಲಿಬಾರ್ ಅನಿವಾರ್ಯವಾಗಿತ್ತೆ, ಹೀಗೆ ಅನಿವಾರ್ಯ ಎಂದು ಕಂಡರೆ ಯಾರಿಂದ ಗೋಲಿಬಾರ್ ನಡೆಯಿತು ಮತ್ತು ಮೂರನೆಯದು ಪರಿಹಾರ ಏನು ಒದಗಿಸಿದ್ದಾರೆ ಇದು ಯಾರು ಕೊಡಬೇಕು, ನಾಲ್ಕನೆಯದು ನ್ಯಾಯಾಂಗ ತನಿಖೆ, ಹೀಗೆ ನಾಲ್ಕು ಭಾಗವಾಗಿ ವಿಚಾರವನ್ನು ಚರ್ಚೆ ಮಾಡಬೇಕೆಂದಿದ್ದೇನೆ. ದಿನಾಂಕ 15ಕ್ಕೆ ಮುನ್ನ ಒಂದು ವಾರಕ್ಕೆ ಮುಂಚೆ ರಾಜ್ಯ ಸರ್ಕಾರದವರು ಮರಾಠ ಇನ್ಫೆಂಟ್ರಿಯ ಎರಡು ತುಕಡಿ ಕರೆಸಿದರು, ಆರ್‌ಎಎಫ್ ಜವಾನರು ಬಂದಿದ್ದರು, ಕ್ಷಿಪ್ರ ಕಾರ್ಯಾಚರಣೆ ಪಡೆ ರಾಜ್ಯಕ್ಕೆ ರವಾನೆಯಾಗಿತ್ತು. ಅಗತ್ಯ ಬಿದ್ದರೆ ದೆಹಲಿಯಿಂದ ಆರೆಸೇನಾಪಡೆ ತರಿಸುವಂತಹ ಆಲೋಚನೆ ಸರ್ಕಾರಕ್ಕಿತ್ತು. ಇವೆಲ್ಲ ಸಾಲದು ಎಂದು ಈದ್ಗಾ ಮೈದಾನದ ಸುತ್ತ ತಂತಿಬೇಲಿ ಹಾಕಿಸಿದರು. ಇವು ಸಾಲದು ಎಂದು ಹೊರಗಡೆ ಸಹಸ್ರಾರು ಜನರ ಬಂಧನ ಆಯಿತು. ಸಿಕಂದರ್‌ಭಕ್ತ್ ಅವರನ್ನು 13ನೇ ತಾರೀಖು ಬೆಂಗಳೂರಿನಲ್ಲಿ ಬಂಧಿಸಿದರು. ಕುಮಾರಿ ಉಮಾಭಾರತಿಯವರು ನನ್ನನ್ನು ಬಂಧಿಸಿ ಎಂಬ ಸವಾಲು ಎಸೆದಿದ್ದರು. ಆ ಸವಾಲು ಸ್ವೀಕರಿಸಲು ನೀವು ಸಮರ್ಥರಾಗಲಿಲ್ಲ ಚೌಡರೆಡ್ಡಿಯವರೇ. ಉಮಾಭಾರತಿಯವರು, ಯಡಿಯೂರಪ್ಪನವರು, ಈಶ್ವರಪ್ಪನವರು - ಇವರೆಲ್ಲಾ ಹುಬ್ಬಳ್ಳಿಯನ್ನು ತಲುಪಿಬಿಟ್ಟರು, ಅವರನ್ನು ತಡೆಯುವುದು ಸಾಧ್ಯವಾಗಲಿಲ್ಲ. ಇಷ್ಟೆಲ್ಲಾ ವ್ಯವಸ್ಥೆ ಸರ್ಕಾರ ಮಾಡಿದ್ದರೂ ಮತ್ತೂ ಗೋಲಿಬಾರ್ ಮಾಡಬೇಕಾದಂತಹ ಸ್ಥಿತಿ ಉಂಟಾದದ್ದು ನಮ್ಮ ಆಡಳಿತ ವ್ಯವಸ್ಥೆಗೊಡ್ಡಿದ ಒಂದು ದೊಡ್ಡ ಸವಾಲು. ಈ ಸವಾಲನ್ನು ಸರ್ಕಾರ ಹೇಗೆ ಸ್ವೀಕರಿಸುತ್ತದೋ ನಾನು ಆ ವಿವರಣೆಗೆ ಹೋಗುವುದಿಲ್ಲ. ಆ ದಿವಸ ಗೋಲಿಬಾರ್ ದುರದೃಷ್ಟಕರ ಎಂದು ಅನೇಕರು ಹೇಳಿದ್ದಾರೆ. ಇದಕ್ಕೆ ಪೋಲಿಸರಿಂದ ಕೂಡ ವಿವರಣೆ ಬಂದಿದೆ. "ಗೋಲಿಬಾರ್ ಅವಶ್ಯಕತೆ ಇತ್ತೇ ಎನ್ನುವ ಪ್ರಶ್ನೆಗೆ ಉತ್ತರಿಸಿದ ಅವರು, ಇದು ಶಾಂತಿ ಸುವ್ಯವಸ್ಥೆ ಪ್ರಶ್ನೆಯಾಗಿದ್ದು ಪೋಲಿಸರು ಲಾಠಿಚಾರ್ಜ್ ಅಶ್ರುವಾಯು ರಬ್ಬರ್‌ಗುಂಡು ಪ್ರಯೋಗಿಸಿ ಪರಿಸ್ಥಿತಿ ಹತೋಟಿಗೆ ಬರದಿದ್ದಾಗ ಗೋಲಿಬಾರ್ ಮಾಡಿದ್ದಾರೆ" ಎಂದು ಹೇಳಿದ್ದಾರೆ.